**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.56/2022

ಸಾಕ್ಷಿಯನ್ನು ದಿಃ **27.11.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಪಾಟೀ ಸವಾಲುಃ** 1 **ರಿಂದ** 4**ನೇ ಪ್ರತಿವಾದಿಯರ ಪರಃ ಮಾನ್ಯ ಸರ್ಕಾರಿ ವಕೀಲರಿಂದ**:

ನಾನು ಈ ದಾವೆಯ 1ನೇ ವಾದಿಯಾದ ತನ್ನಾಗಿಯಮ್ಮ ರವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನಾನು 1ನೇ ವಾದಿಯ ಹಿರಿಮಗ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ದಲ್ಲಿರುವ ಸಹಿ ನನ್ನದು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ ಮತ್ತು ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿದೆ. ದಾವಾ ಐಟಂ ನಂ.1 ನನ್ನ ತಾಯಿಗೆ ಅವರ ತಂದೆಯ ಕಡೆಯಿಂದ ಬಂದಿದೆ. ದಾವಾ ಐಟಂ ನಂ.1 ಮೂಲತಃ ಸರ್ಕಾರಿ ಗೋಮಾಳ ಜಮೀನಾಗಿತ್ತು. ಎಲಚನಹಳ್ಳಿ ಗ್ರಾಮದ ಸರ್ವೇ ನಂಬರ್ 1ಕ್ಕೂ ನಾವು ವಾಸವಾಗಿರುವ ಪೆರಿಯಾರ್ ಗ್ರಾಮಕ್ಕೂ ಸುಮಾರು 100 ಮೀಟರ್ ದೂರ ಇದೆ. ಬಿಳಿಕೆರೆ ಹೋಬಳಿಯಲ್ಲಿ ಪೆರಿಯಾರ್ ಗ್ರಾಮ ಅಸ್ತಿತ್ವದಲ್ಲಿ ಇದೆ ಎಂದು ತೋರಿಸುವ ಬಗ್ಗೆ ದಾಖಲೆ ಇದೆಯೇ ಎಂದರೆ ಹಿಂದೆ ಮಾರಪ್ಪನಕಟ್ಟೆ ಗ್ರಾಮವಾಗಿದ್ದು, ಈಗ ಸುಮಾರು 20 ವರ್ಷಗಳಿಂದ ಈಚೆಗೆ ಪೆರಿಯಾರ್ ಗ್ರಾಮವಾಗಿದೆ. ಪೆರಿಯಾರ್ ಗ್ರಾಮದ ಬಗ್ಗೆ ಗಡಿ ಗುರುತಿಸಿದ ದಾಖಲೆ ಇದೆಯೇ ಎಂದರೆ ಸ್ಕೆಚ್ ಕೊಟ್ಟಿದ್ದೇನೆ. ಬಿಳಿಕೆರೆ ಹೋಬಳಿಯಲ್ಲಿ ಪೆರಿಯಾರ್ ಗ್ರಾಮ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾವು ಇಲ್ಲ ಎಂದರೆ ಸರಿಯಲ್ಲ. ನಾನಾಗಲೀ, 1 ರಿಂದ 6ನೇ ವಾದಿಯರಾಗಲೀ ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಗೋಮಾಳ ಜಮೀನನ್ನು ಲಪಟಾಯಿಸಬೇಕು ಎಂದು ಸುಳ್ಳು ದಾವೆ ತಂದಿದ್ದೇವೆ ಎಂದರೆ ಸರಿಯಲ್ಲ. 1ನೇ ವಾದಿ ಮತ್ತು ಇತರೆ ವಾದಿಯರು 1965ರಿಂದಲೂ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದೇವೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಕೈಬರಹದ ಪಹಣಿ ಕೊಟ್ಟಿದ್ದೇನೆ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)

ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.